# ವೇದಾಂತ ಮಾಹಾತ್ಮ್ಯ

ಶೋ. ಪ. ರಾಮಾನುಜನ್

ವೇದಾಂತಸಿದ್ಧಾಂತವಾದ ವಿಶಿಷ್ಟಾದ್ವೈತದ ಒಂದು ಪ್ರಧಾನವಾದ ಅಂಶವೆಂದರೆ ಪ್ರಮಾಣತರ್ಕಾನುಸಾರಿತ್ವ, ಅಂದರೆ, ಸುವ್ಯವಸ್ಥಿತವಾದ ಪ್ರಮಾಣ-ಪ್ರಮೇಯ-ವ್ಯವಸ್ಥೆ ಮತ್ತು ಸತ್ತರ್ಕಕ್ಕೆ ಅನುಗುಣವಾದ ವಿಚಾರಮಾರ್ಗ. ಈ ಸಿದ್ಧಾಂತದಲ್ಲಿ ಎಲ್ಲ ಪದಾರ್ಥಗಳನ್ನೂ ಪ್ರಮಾಣ (ಜ್ಞಾನಕ್ಕೆ ಸಾಧನಗಳು) ಮತ್ತು ಪ್ರಮೇಯ (ಜ್ಞಾನದ ವಿಷಯಗಳು) ಎಂದು ಎರಡು ವಿಭಾಗ ಮಾಡಲಾಗಿದೆ. ಪ್ರಮಾಣಗಳು ಮೂರು ವಿಧವಾಗಿವೆ. ಅವು ಪ್ರತ್ಯಕ್ಷ (ಇಂದ್ರಿಯಗಳಿಂದ ಉಂಟಾಗುವ ಜ್ಞಾನ), ಅನುಮಾನ (ಅಥವಾ ಊಹ) ಮತ್ತು ಶಬ್ದ. ಇವುಗಳಲ್ಲಿ ಪ್ರತ್ಯಕ್ಷಪ್ರಮಾಣವು ಇಂದ್ರಿಯಗಳಿಂದ ಉಂಟಾಗುವುದರಿಂದಲೂ, ಅನುಮಾನವು ಪ್ರತ್ಯಕ್ಷವಾಗಿ ಕಂಡ ವ್ಯಾಪ್ತಿ ಮುಂತಾದ ಸಹಕಾರಿಗಳ ಸಹಾಯದಿಂದ ಉಂಟಾಗುವುದರಿಂದಲೂ, ಐಂದ್ರಿಯಕ ವಿಷಯಗಳನ್ನು (ಲೌಕಿಕ ವಿಷಯಗಳನ್ನು) ಮಾತ್ರ ಗ್ರಹಿಸಬಲ್ಲವು. ಅತೀಂದ್ರಿಯವಾದ ಹಾಗೂ ಪಾರಲೌಕಿಕವಾದ ವಿಷಯಗಳನ್ನು ತಿಳಿಯುವುದಕ್ಕೆ ಪ್ರತ್ಯಕ್ಷಾನುಮಾನಗಳು ನಿಷ್ಪ್ರಯೋಜಕವಾದ್ದರಿಂದ ಶಬ್ದವೇ ಅದೃಷ್ಟವಿಷಯಗಳಲ್ಲಿ ಪ್ರಮಾಣವಾಗಿದೆ.

ಶಬ್ದವೆಂದರೆ ಆಪ್ತರೂ (ಯಥಾರ್ಥವನ್ನು ಹೇಳುವವರು; ನಂಬಲು ಅರ್ಹರು) ಹಾಗೂ ಹಿತೈಷಿಗಳೂ ಆದ ಹಿರಿಯರ ಉಪದೇಶ ಅಥವಾ ಆಜ್ಞೆಗಳು. ಶಬ್ದಪ್ರಮಾಣದಲ್ಲಿ ಶ್ರುತಿ ಹಾಗೂ ಸ್ಮೃತಿ ಎಂದು ಎರಡು ವಿಧ. ಶ್ರುತಿ ಎಂದರೆ ವೇದ, ಮತ್ತು ಸ್ಮೃತಿ ಎಂದರೆ ವೇದಾನುಸಾರಿಯಾದ ಇತಿಹಾಸ ಪುರಾಣಗಳು ಮತ್ತು ಮಹರ್ಷಿಗಳಿಂದ ಪ್ರಣೀತವಾದ ಸ್ಮೃತಿ, ಸಂಹಿತಾ, ಸೂತ್ರಾದಿಗಳು. ಇದರಲ್ಲಿ ಶ್ರುತಿಯೇ ಪ್ರಬಲತರವಾದ ಪ್ರಮಾಣ. ಅಂದರೆ, ಶ್ರುತಿಗೆ ವಿರುದ್ಧವಾದ ವಿಷಯಗಳನ್ನು ಸ್ಮೃತಿಗಳು ಹೇಳಿದರೆ ಅವು ಅಪ್ರಮಾಣವಾಗುತ್ತವೆ.

ಹೀಗೆ ಅತೀಂದ್ರಿಯಾರ್ಥಸಾಧಕವಾದ ವೇದಪ್ರಮಾಣದ ಸ್ವರೂಪ ಮತ್ತು ಪ್ರಾಮಾಣ್ಯದ ಬಗ್ಗೆ ಮುಂದೆ ವಿಚಾರ ಮಾಡಲಾಗುತ್ತದೆ.

ವೇದವೆಂಬುದೊಂದು ಶಬ್ದರಾಶಿ. ಇದನ್ನು ರಚಿಸಿದವರು ಯಾರೂ ಇಲ್ಲ. ಅಂದರೆ ಇದು ಅಪೌರುಷೇಯ. ಭಗವಂತನೂ ಸಹ ಸರ್ವಜ್ಞನಾದ್ದರಿಂದ ವೇದವನ್ನು ತಿಳಿದಿರುತ್ತಾನೆಯೇ ಹೊರತು ಅದನ್ನು ರಚಿಸುವುದಿಲ್ಲ. ಇದನ್ನು, 'ಯೋ ಬ್ರಹ್ಮಾಣಂ ವಿದಧಾತಿ ಪೂರ್ವಂ ಯೋ ವೈ ವೇದಾಂಶ್ಚ ಪ್ರಹಿಣೋತಿ ತಸ್ಮೈ' ಎಂಬ ಉಪನಿಷದ್ವಾಕ್ಯವು ತಿಳಿಸುತ್ತದೆ. ಪೂರ್ವಾಚಾರ್ಯರೂ ಸಹ 'ಪ್ರವಕ್ತಾ ಛಂದಸಾಂ' ಎಂದು ಭಗವಂತನನ್ನು ವೇದಕ್ಕೆ ಪ್ರಥಮ ಪ್ರವರ್ತಕನೆಂದು ಹೇಳಿದ್ದಾರೆ. ಈ ರೀತಿ ಅಪೌರುಷೇಯವಾಗಿರುವುದರಿಂದ ವೇದ ಪೌರುಷೇಯತ್ವ-ಪ್ರಯುಕ್ತವಾದ ಭ್ರಮ, ಪ್ರಮಾದ, ವಿಪ್ರಲಂಭ ಇತ್ಯಾದಿ ದೋಷಗಳಿಂದ ವಿಮುಕ್ತವಾಗಿದೆ. ಅಂದರೆ ಒಂದು ಗ್ರಂಥವನ್ನು ಒಬ್ಬ ಕರ್ತೃ ರಚಿಸುವುದಾದರೆ ಆ ಗ್ರಂಥಕರ್ತೃವಿನ ಬುದ್ಧಿಭ್ರಮದಿಂದಲೋ (ವಸ್ತುಸ್ಥಿತಿಯನ್ನು ಅನ್ಯಥಾ ಬೇರೆಯಾಗಿ ತಿಳಿದಿರುವಿಕೆಯಿಂದ), ಪ್ರಮಾದದಿಂದ (ತಿಳಿದಿರುವುದು ಯಥಾವತ್ತಾಗಿದ್ದರೂ ಅದನ್ನು ಗ್ರಂಥದಲ್ಲಿ ನಿರೂಪಣ ಮಾಡುವಾಗ ಅವಶಾತ್ ದೋಷ ಸಂಭವಿಸು-ವುದರಿಂದಲೋ) ಅಥವಾ ವಿಪ್ರಲಂಭದಿಂದ (ಬೇಕೆಂದೇ ವಸ್ತುಸ್ಥಿತಿಯನ್ನು ಅನ್ಯಥಾ ತಿಳಿಸಬೇಕೆಂಬ ಕೆಟ್ಟ ಭಾವನೆ-ಯಿಂದಲೋ) ಆ ಗ್ರಂಥದಲ್ಲಿ ದೋಷಗಳು ಸಂಭವಿಸಿದರೆ ಆ ಗ್ರಂಥ ಅಪ್ರಮಾಣವಾಗುತ್ತದೆ. ಅಪೌರುಷೇಯವಾದ್ದರಿಂದ ವೇದದಲ್ಲಿ ಈ ಶಂಕೆಗಳಿಗೆ ಪ್ರಸಕ್ತಿ ಇಲ್ಲದಿದ್ದು ವೇದವು ದೋಷರಹಿತವೆಂದು ಸಿದ್ಧಿಸುತ್ತದೆ.

ವೇದದ ಮತ್ತೊಂದು ವಿಶೇಷ ಅದರ ನಿತ್ಯತ್ವ. ವೇದ ಅನಾದಿ ಹಾಗೂ ನಿತ್ಯವಾಗಿದೆ. ಇಲ್ಲಿ ವೇದ ಶಬ್ದರೂಪವಾಗಿರುವುದರಿಂದ ಹಾಗೂ ಶಬ್ದವು ಹೇಳುವವನ ಪ್ರಯತ್ನಕ್ಕೆ ಅನುಗುಣವಾಗಿ ಹರಡುವ ಧ್ವನಿರೂಪವಾಗಿರುವುದರಿಂದ ಆ ಧ್ವನಿಯು ಉಚ್ಚರಿಸಿ ಕೇಳಿಸಿಕೊಂಡಂತೆಯೇ ನಾಶಹೊಂದುವುದು. ಹೀಗಿರುವಾಗ ಶಬ್ದವು, ನಿತ್ಯವಾಗಿರುವುದು ಹೇಗೆ ಸಾಧ್ಯ ಎಂಬ ಶಂಕೆ ಉಂಟಾಗಬಹುದು. ಇದಕ್ಕೆ ಸಮಾಧಾನ ಈ ಆಕ್ಷೇಪದಲ್ಲಿ ಹೇಳಿರುವ ಶಬ್ದವೆಂಬುದು ವರ್ಣಗಳನ್ನು (ಅಕ್ಷರಗಳನ್ನು) ಸೂಚಿಸುತ್ತದೆ ಹಾಗೂ ಇದು ಪ್ರಕೃತಿಯ ಪರಿಣಾಮ(ವಿಕಾರ)ವಾದ ಒಂದು ತತ್ತ್ವ, ಇದು ವಕ್ತೃಪ್ರಯತ್ನಾನುಗುಣವಾಗಿ ಉತ್ಪತ್ತಿ-ವಿನಾಶಗಳನ್ನು ಹೊಂದುತ್ತದೆ. ಆದರೆ, ವೇದದಲ್ಲಿ ನಿತ್ಯವೆಂದು ಹೇಳುವುದು ಈ ಧ್ವನಿ ಅಥವಾ ವರ್ಣಗಳ ನಿತ್ಯತ್ವವನ್ನಲ್ಲ. ಅಂದರೆ, ಈ ವರ್ಣಗಳು ಅವುಗಳ ಸ್ವರಗಳು (ಉಚ್ಚಾರಣ ಕ್ರಮ) ಮತ್ತು ಅವುಗಳ ಆನುಪೂರ್ವಿಕ್ರಮ (ನಿಯತವಾದ ವರ್ಣ ಪರಂಪರೆ) ದಲ್ಲಿ ಯಾವ ಕಾಲದಲ್ಲಿಯೂ ಕಿಂಚಿತ್ತೂ ವ್ಯತ್ಯಾಸವಿಲ್ಲದಿರುವಿಕೆಯನ್ನು. ಶ್ರೀಮದ್ವೇದವ್ಯಾಸರು ತಮ್ಮ ಬ್ರಹ್ಮಸೂತ್ರದಲ್ಲಿ ದೇವತಾಧಿಕರಣ ವಿಚಾರ ಮಾಡುವ ಅವಸರದಲ್ಲಿ

ಪ್ರಾಸಂಗಿಕವಾಗಿ ವೇದನಿತ್ಯತ್ವವನ್ನು, 'ಅತ ಏವ ಚ ನಿತ್ಯತ್ವಂ । ಸಮಾನನಾಮರೂಪತ್ವಾಚ್ಚಾವೃತ್ತಾವಪ್ಯವಿರೋಧೋ ದರ್ಶನಾತ್ ಸ್ಮೃತೇಶ್ಚ' ಎಂಬ ಸೂತ್ರಗಳಿಂದ ಈ ರೀತಿ ನಿಷ್ಕರ್ಷೆ ಮಾಡಿದ್ದಾರೆ. ಈ ರೀತಿಯ ನಿತ್ಯತ್ವ ಲೌಕಿಕವ್ಯವಹಾರದಲ್ಲಾಗಲೀ, ಗ್ರಂಥಗಳಲ್ಲಾಗಲೀ ಕಂಡುಬರುವುದಿಲ್ಲವೆಂಬುದರಿಂದ ವೇದಕ್ಕೆ ನಿತ್ಯತ್ವ ಒಂದು ವಿಶೇಷವನ್ನು ಸಾಧಿಸುತ್ತದೆ.

ಸ್ವರ, ವರ್ಣ, ಆನುಪೂರ್ವಿಗಳ ವ್ಯತ್ಯಾಸದಿಂದ ಅರ್ಥವ್ಯತ್ಯಾಸವೇರ್ಪಟ್ಟು ಹಾನಿಕರವಾದ ಪರಿಣಾಮಗಳು ಏರ್ಪಡುತ್ತವೆ ಎಂದು ಲಕ್ಷಣಕಾರರು, 'ಮಂತ್ರೋ ಹೀನಃ ಸ್ವರತೋ ವರ್ಣತೋ ವಾ ಮಿಥ್ಯಾಪ್ರಯುಕ್ತೋ ನ ತಮರ್ಥಮಾಹ । ಸ ವಾಗ್ವಜ್ರಃ ಯಜಮಾನಂ ಹಿನಸ್ತಿ ಯಥೇಂದ್ರಶತ್ರುಃ ಸ್ವರತೋಽಪರಾಧಾತ್ ॥' ಎಂಬಲ್ಲಿ ಸದೃಷ್ಟಾಂತವಾಗಿ ವ್ಯಕ್ತ-ಪಡಿಸಿದ್ದಾರೆ. (ತ್ವಷ್ಟಾ ಎಂಬುವರು ತಮ್ಮ ಮಗನನ್ನು ಇಂದ್ರ ಕೊಂದನೆಂಬ ರೋಷದಿಂದ ಇಂದ್ರನನ್ನು ಕೊಲ್ಲುವಂತಹ ಮಗನನ್ನು ಪಡೆಯಲೆಂದು ಒಂದು ಯಾಗ ಮಾಡಿದರು. ಆ ಯಾಗದಲ್ಲಿ ಪ್ರಧಾನಾಹುತಿಯಲ್ಲಿ 'ಇಂದ್ರಶತ್ರುರ್ವರ್ಧಸ್ವ' ಎಂಬ ಮಂತ್ರವನ್ನು ಸ್ವರವ್ಯತ್ಯಾಸದೊಡನೆ ಉಚ್ಚರಿಸಿಬಿಟ್ಟರು. ಆದರಿಂದಾಗಿ ಆ ವಾಕ್ಯದಲ್ಲಿ ಅರ್ಥವ್ಯತ್ಯಾಸವುಂಟಾಗಿ ಇಂದ್ರನಿಂದ ಕೊಲ್ಲಲ್ಪಡುವ ಮಗನನ್ನು ಹಡೆದರು. ಹೀಗಿರುವುದರಿಂದ ಸ್ವರ, ವರ್ಣ, ಆನುಪೂರ್ವಿ ವ್ಯತ್ಯಾಸ ಹಾನಿಕರ ಎಂದು ಈ ಶ್ಲೋಕದ ತಾತ್ಪರ್ಯ).

ಈ ರೀತಿಯ ವೇದನಿತ್ಯತ್ವದ ವಿಷಯದಲ್ಲಿ ಮತ್ತೊಂದು ಸಂಶಯ ಬರಬಹುದು. ವೇದದಲ್ಲಿ ಅನೇಕ ಉಪಾಖ್ಯಾನಗಳೂ, ವೃತ್ತಾಂತಗಳೂ ಇವೆ. ಕೆಲವು ಭಾಗಗಳು ಕೆಲವು ಋಷಿಗಳಿಂದ ಪ್ರಣೀತವೆಂದೂ, ಋಷಿಗಳ ಹೆಸರಿಂದಲೂ ಪ್ರಯುಕ್ತವಾಗಿವೆ ('ವಿಶ್ವಾಮಿತ್ರಸ್ಯ ಸೂಕ್ತಂ' ಇತ್ಯಾದಿ). ವೇದವೂ ಸಹ, 'ನಮ ಋಷಿಭ್ಯೋ ಮಂತ್ರಕೃದ್ಭ್ಯಃ' ಎಂದು ಹೇಳುತ್ತದೆ. ಹೀಗೆಲ್ಲ ಇರುವುದರಿಂದ ಇವು ಪ್ರಮಾಣವಾಗಬೇಕಾದರೆ ವೇದ ಆಯಾ ವೃತ್ತಾಂತಗಳು ನಡೆದ ನಂತರ ಹಾಗೂ ಆಯಾ ಋಷಿಗಳಿಂದ ಪ್ರಣೀತವಾಗಿರಬೇಕಲ್ಲವೇ? ಹಾಗಾದಲ್ಲಿ ವೇದ ಅನಾದಿ ಹಾಗೂ ನಿತ್ಯ ಎಂಬುದು ಸಂಗತವಾಗುವುದಿಲ್ಲವಲ್ಲ ಎಂದರೆ, ಇದಕ್ಕೆ ಉತ್ತರ - ವೇದವು ಹಿಂದೆ ಹೇಳಿದಂತೆ ಅನಾದಿ ಹಾಗೂ ನಿತ್ಯವೇ. ಪ್ರಳಯಕಾಲದಲ್ಲಿಯೂ ಸಹ ಭಗವಂತನು ವೇದವನ್ನು ಸ್ಮರಿಸಿಕೊಂಡಿದ್ದು ಪುನಃ ಸೃಷ್ಟಿಕಾಲದಲ್ಲಿ ಅದನ್ನು ಚತುರ್ಮುಖ-ಬ್ರಹ್ಮನಿಗೆ ಪೂರ್ವ-ಪೂರ್ವ-ಕ್ರಮ-ವಿಶಿಷ್ಟವಾಗಿಯೇ ಉಪದೇಶಿಸುತ್ತಾನಾದ್ದರಿಂದ ವೇದನಿತ್ಯತ್ವಕ್ಕೆ ಹಾನಿಯಿಲ್ಲ. ವೇದದಲ್ಲಿಯೂ 'ವಾಚಾ ವಿರೂಪ ನಿತ್ಯಯಾ', 'ಪೂರ್ವೇ ಪೂರ್ವೇಭ್ಯೋ ವಚ ಏತದೂಚುಃ' ಇತ್ಯಾದಿಯಾಗಿಯೂ, ಸ್ಮೃತಿಗಳಲ್ಲಿ, 'ಅನಾದಿನಿಧನಾ ಹ್ಯೇಷಾ ವಾಗುತ್ಸೃಷ್ಟಾ ಸ್ವಯಂಭುವಾ । ಆದೌ ವೇದಮಯೀ ದಿವ್ಯಾ' ಎಂದು ವೇದನಿತ್ಯತ್ವವು ಉದ್ಘೋಷಿತವಾಗಿದೆ. ಆದರೆ ಈ ವೃತ್ತಾಂತಾದಿಗಳ ಗತಿ ಏನೆಂದರೆ, ಅವು ಸೃಷ್ಟಿಯು ಯಾವ ರೀತಿ ಆಗಬೇಕೆಂಬುದನ್ನು ಸೂಚಿಸುತ್ತವೆ ಅಥವಾ ಜಗತ್ತು ಅನಾದಿಯಾದ್ದರಿಂದ ಪೂರ್ವಕಲ್ಪಗಳಲ್ಲಿ ನಡೆದುದನ್ನು ಪ್ರತಿಪಾದಿಸುತ್ತವೆ. ಬ್ರಹ್ಮನು ಜಗತ್ಸೃಷ್ಟಿಯನ್ನು ವೇದದಲ್ಲಿ ಹೇಳಿದಂತೆಯೇ ಹಾಗೂ ಎಂದಿನಂತೆಯೇ ಮಾಡುತ್ತಾನೆಂದೂ, ಇದು ಭಗವಂತನ ಆದೇಶರೂಪವಾಗಿದೆ ಎಂದೂ, 'ಋತಂ ಚ ಸತ್ಯಂ ಚಾಭೀದ್ಧಾತ್ತಪಸೋಽಧ್ಯಜಾಯತ । ತತೋ ರಾತ್ರಿರಜಾಯತ ತತಸ್ಸಮುದ್ರೋ ಅರ್ಣವಃ । ಸಮುದ್ರಾದರ್ಣವಾದಧಿ ಸಂವತ್ಸರೋ ಅಜಾಯತ । ಅಹೋರಾತ್ರಾಣಿ ವಿದಧದ್ವಿಶ್ವಸ್ಯ ಮಿಷತೋ ವಶೀ । ಸೂರ್ಯಾಚಂದ್ರಮಸೌ ಧಾತಾ ಯಥಾಪೂರ್ವಮಕಲ್ಪಯತ್', 'ವೇದೇನ ರೂಪೇ ವ್ಯಕರೋತ್ । ಸತಾಸತೀ ಪ್ರಜಾಪತಿಃ' ಮುಂತಾದ ಕಡೆಗಳಲ್ಲಿ ವೇದದಲ್ಲಿಯೂ, ಸ್ಮೃತಿಗಳಲ್ಲಿ, 'ನಾಮರೂಪಂ ಚ ಭೂತಾನಾಂ ಕೃತ್ಯಾನಾಂ ಚ ಪ್ರಪಂಚನಂ । ವೇದಶಬ್ದೇಭ್ಯ ಏವಾದೌ ದೇವಾದೀನಾಂ ಚಕಾರ ಸಃ ॥' ಎಂಬಲ್ಲಿಯೂ ಹೇಳಲಾಗಿದೆ. ಬ್ರಹ್ಮನು ಸೃಷ್ಟಿ ಹಾಗೂ ನಾಮರೂಪವಿಧಾನವನ್ನು ವೇದದಿಂದ ಮಾಡುವುದರಿಂದ ಈ ಭಾಗಗಳಿಗೆ ಪ್ರಾಮಾಣ್ಯ ಸಿದ್ಧ. ವೇದದ ಹಲವು ಸೂಕ್ತಗಳು, ಕಾಂಡಗಳು ಇತ್ಯಾದಿಗಳೂ ಸಹ ಆಯಾ ಋಷಿಗಳಿಂದ ವಿಶೇಷವಾಗಿ ಕಂಡು, ಆಚರಿಸಿ, ಪ್ರವಚನ ಮಾಡಲ್ಪಟ್ಟ ಕಾರಣದಿಂದ ಅವರವರ ಹೆಸರುಗಳಿಂದ ಬಳಸಲಾಗುತ್ತಿವೆಯೇ ಹೊರತು ಆ ಋಷಿಗಳು ಆ ಭಾಗಗಳನ್ನು ರಚಿಸಿರುವುದಿಲ್ಲ (ಇದಕ್ಕೆ ವೇದದಲ್ಲಿ ಅನೇಕ ಉಪಾಖ್ಯಾನಗಳು ದೃಷ್ಟಾಂತವಾಗಿವೆ. ಅವುಗಳನ್ನು ಆಯಾ ಸಂದರ್ಭಗಳಲ್ಲಿ ವಿವರಿಸಲಾಗುತ್ತದೆ).

ಇಲ್ಲಿ ಮತ್ತೊಂದು ಸಂಶಯ ಉಂಟಾಗುತ್ತದೆ. ವೇದದಲ್ಲಿ ಹೇಳಿರುವ ಇಂದ್ರಾದಿ ಪದಾರ್ಥಗಳು ನಶ್ವರವಾಗಿದ್ದು (ಉತ್ಪತ್ತಿ ಹಾಗೂ ವಿನಾಶವುಳ್ಳವಾಗಿದ್ದು), ವೇದ ನಿತ್ಯವಾದರೆ, ಆ ಪದಾರ್ಥಗಳ ಉತ್ಪತ್ತಿಗೆ ಪೂರ್ವಕಾಲದಲ್ಲಿಯೂ ಮತ್ತು ಅವುಗಳ ವಿನಾಶೋತ್ತರಕಾಲದಲ್ಲಿಯೂ ಆಯಾ ವಾಚಕಪದಗಳಿಗೆ ವಾಚ್ಯವಾದ ಪದಾರ್ಥಗಳು ಇಲ್ಲದಿರುವುದರಿಂದ ಅನಿತ್ಯಸಂಯೋಗ ಎಂಬ ದೋಷ ವೇದದಲ್ಲಿ ಉಂಟಾಗುತ್ತದೆ. ಆದ್ದರಿಂದ ವೇದಕ್ಕೆ ನಿತ್ಯತ್ವ ಅಸಂಗತ ಎಂದರೆ, ಇದಕ್ಕೆ ಸಮಾಧಾನ – ಜಗತ್ತೂ ಅನಾದಿಯಾಗಿರುವುದರಿಂದ ಮತ್ತು ಜಗತ್ತಲ್ಲಿರುವ ಎಲ್ಲ ಪದಾರ್ಥಗಳೂ ಪ್ರವಾಹ ನಿತ್ಯವಾಗಿರುವುದರಿಂದ, ಅಂದರೆ ಪ್ರತಿಯೊಂದು ಸೃಷ್ಟಿಯೂ ತತ್ತತ್ಪೂರ್ವಸೃಷ್ಟಿಗೆ ಸರೂಪವಾಗಿಯೇ ಇರುವುದಾದ್ದರಿಂದ ಈ ಶಬ್ದಗಳು ಪ್ರಕೃತ ಕಲ್ಪದ ಅಥವಾ ಸೃಷ್ಟಿಯ ಪದಾರ್ಥವಿಲ್ಲದಿದ್ದರೂ, ಅದರ ಸ್ಥಾನದಲ್ಲಿ ಇತರ ಪೂರ್ವಾದಿ-

ಸೃಷ್ಟಿಗಳಲ್ಲಿದ್ದ ತತ್ತಜ್ಜಾತೀಯವಸ್ತುಗಳನ್ನು ಸೂಚಿಸುವುದರ ಮೂಲಕ ಸಾರ್ಥಕವಾಗಿ ವೇದ ನಿತ್ಯತ್ವ ಸಂಗತ-ವಾಗುವುದು. ಈ ಪೂರ್ವಪಕ್ಷ ಸಿದ್ಧಾಂತಗಳೆಲ್ಲವೂ (ಪ್ರಶ್ನೋತ್ತರಗಳು) ಶ್ರೀಮದ್ವೇದಾಂತದೇಶಿಕರ ಅಧಿಕರಣಸಾರಾವಳಿ ಎಂಬ ಗ್ರಂಥದಲ್ಲಿ ವಿಶದವಾಗಿ ಚರ್ಚೆ ಮಾಡಲಾಗಿದೆ.

ವೇದದ ಸ್ವರೂಪ ಈ ರೀತಿಯಾಗಿ ಅನಾದಿಸಿದ್ಧವಾದ, ಅಪೌರುಷೇಯವಾದ (ನಿತ್ಯ ಹಾಗೂ ನಿರ್ದೋಷವಾದ) ಪ್ರಬಲತರ ಶಬ್ದಪ್ರಮಾಣ ಎಂದು ಉಪಪಾದಿಸಲಾಯಿತು. ಈಗ ಅದರ ಪ್ರಾಮಾಣ್ಯದ ಬಗ್ಗೆ ವಿಚಾರ ಮಾಡೋಣ.

ವೇದವು ಸ್ವತಃ ಪ್ರಮಾಣವು. ಅಂದರೆ, ವೇದಪ್ರಾಮಾಣ್ಯವನ್ನು ಸಾಧಿಸಲು ಇತರ ಪ್ರಮಾಣಗಳು ಅನವಶ್ಯಕ ಹಾಗೂ ಅಶಕ್ತಗಳು. ವೇದಪ್ರಾಮಾಣ್ಯವನ್ನು ಅಲ್ಲಗಳೆಯಲೂ ಸಹ ಇತರ ಪ್ರಮಾಣಗಳಿಂದ ಶಕ್ಯವಿಲ್ಲ. ಆಚಾರ್ಯರೂ ಸಹ, 'ವಿಶ್ವಕೃನ್ನಾಮಮಾತುಂ ನಾಪಹ್ನೋತುಂ ಚ ಶಕ್ಯಃ' ಎಂದು ಹೇಳಿದ್ದಾರೆ. ಅಪ್ರಾಮಾಣ್ಯಕ್ಕೆ ಕಾರಣವಾದ ಕರಣದೋಷ (ಸಾಧನದಲ್ಲಿ ದೋಷ ಸಂಭವ) ಮತ್ತು ಬಾಧಕಪ್ರತ್ಯಯ (ವೇದೋಕ್ತಕ್ಕೆ ವಿಪರೀತವಾಗಿ ಪ್ರತ್ಯಕ್ಷಾದಿಸಿದ್ಧವಿಷಯಗಳು ಇರುವುದು) ಎಂಬ ದೋಷಗಳು ಕಂಡು ಬರುವುದಿಲ್ಲವಾದ್ದರಿಂದ ವೇದದ ಪ್ರಾಮಾಣ್ಯ ಸುಸ್ಥಿತವಾಗಿದೆ.

ವೇದದ ಪ್ರಾಶಸ್ತ್ಯವನ್ನು ಮನುಸ್ಮೃತಿಯಲ್ಲಿ ವಿಶದವಾಗಿ ಹೇಳಿದೆ. ಪ್ರಪಂಚದಲ್ಲಿ ಸಕಲ ಪ್ರಾಣಿವರ್ಗವೂ ತನ್ನ ಇಷ್ಟಸಿದ್ಧಿಯನ್ನೂ ಅನಿಷ್ಟನಿವೃತ್ತಿಯನ್ನೂ ಅಭಿಲಷಿಸುತ್ತದೆ. ಆದರೆ ಅವುಗಳ ಸಿದ್ಧಿಯಾಗುವುದು ಧರ್ಮದ ಆಚರಣೆಯಿಂದಲೇ ('ಅಭ್ಯುದಯ-ನಿಃಶ್ರೇಯಸ-ಸಾಧನಂ ಧರ್ಮಃ' ಎಂದು ಐಹಿಕ ಹಾಗೂ ಆಮುಷ್ಮಿಕವಾದ ಸಕಲಕ್ಷೇಮಗಳಿಗೂ ಸಾಧನವಾದುದು ಧರ್ಮವೆನ್ನಲಾಗುತ್ತದೆ) ಎಂದು ಹೇಳಿ ಮನುವು ಆ ಧರ್ಮದ ಮೂಲ (ಬೇರು) ವೇದವೆಂದು ತಿಳಿಸಿದ್ದಾರೆ. ('ಕೃಷ್ಣಂ ಧರ್ಮಂ ಸನಾತನಂ', 'ರಾಮೋ ವಿಗ್ರಹವಾನ್ ಧರ್ಮಃ' ಇತ್ಯಾದಿಯಾಗಿ ಭಗವಂತನೇ ಸನಾತನ ಹಾಗೂ ಮೂರ್ತಿಮತ್ತಾದ ಧರ್ಮವೆಂದಿರುವುದರಿಂದ ಹಾಗೂ ಆ ಭಗವಂತನು 'ವೇದೈಶ್ಚ ಸರ್ವೈರಹಮೇವ ವೇದ್ಯಃ' ಎಂದು ವೇದವೇದ್ಯನಾಗಿರುವುದರಿಂದ ವೇದವು ಧರ್ಮಮೂಲವಾಗುತ್ತದೆ.) 'ವೇದೋಽಖಿಲೋ ಧರ್ಮಮೂಲಂ ಸ್ಮೃತಿಶೀಲೇ ಚ ತದ್ವಿದಾಂ । ಆಚಾರಶ್ಚೈವ ಸಾಧೂನಾಂ....' ಎಂಬುದು ಅವರ ಸೂಕ್ತಿ. ವೇದವೇ ಮನು ಹೇಳಿದ್ದೆಲ್ಲ ಔಷಧಪ್ರಾಯ ಎಂದು ಹೇಳಿದೆ. ('ಯದ್ವೈ ಕಿಂಚ ಮನುರವದತ್ತದ್ಭೇಷಜಂ'). ಆಪಸ್ತಂಬರೂ ಸಹ ಧರ್ಮಸೂತ್ರದಲ್ಲಿ 'ಅಥಾತಃ ಸಾಮಯಾಚಾರಿಕಾನ್ ಧರ್ಮಾನ್ ವ್ಯಾಖ್ಯಾಸ್ಯಾಮಃ ಧರ್ಮಜ್ಞಸಮಯಃ ಪ್ರಮಾಣಂ । ವೇದಾಶ್ಚ' ಎಂದು ಧರ್ಮಾಧರ್ಮಗಳ ವಿಷಯದಲ್ಲಿ (ಅಲೌಕಿಕಾರ್ಥದಲ್ಲಿ) ವೇದವೇ ಪ್ರಮಾಣವೆಂದಿದ್ದಾರೆ. ಮತ್ತೂ ವೇದವೇ ಪರಮಧರ್ಮವೆಂಬುದೂ 'ವೇದಮೇವ ಜಪೇನ್ನಿತ್ಯಂ ಯಥಾಕಾಲಮತಂದ್ರಿತಃ । ನ ಹ್ಯಸ್ಯಾಹುಃ ಪರಂ ಧರ್ಮಃ ಉಪಧರ್ಮೋಽನ್ಯ ಉಚ್ಯತೇ ॥' ಎಂಬುದರಿಂದ ಸ್ಪಷ್ಟವಾಗುತ್ತದೆ.

ವೇದವೆಂಬ ಶಬ್ದರಾಶಿಯು ಅನಂತವೂ (ಕೊನೆಯಿಲ್ಲದೂ) ಆಗಿದೆ. ವೇದದಲ್ಲಿಯೇ 'ಅನಂತಾ ವೈ ವೇದಾಃ' ಎಂದು ಈ ವಿಷಯ ಪ್ರತಿಪಾದಿತವಾಗಿದೆ. (ಭರದ್ವಾಜ ಋಷಿಯು ೩೦೦ ವರ್ಷಗಳ ಕಾಲವಾದರೂ ವೇದಾಧ್ಯಯನವನ್ನೇ ಮಾಡುತ್ತ ಗೃಹಸ್ಥಾಶ್ರಮ ಸ್ವೀಕಾರಾದಿಗಳಲ್ಲಿ ಆಸಕ್ತಿ ಇಲ್ಲದೆ ಇದ್ದುದನ್ನು ಕಂಡ ಇಂದ್ರನು ಅವರಿಗೆ ವೇದದ ಆನಂತ್ಯವನ್ನು ತಿಳಿಯಪಡಿಸುವುದಕ್ಕಾಗಿ ಮೂರು ಪರ್ವತಾಕಾರಗಳನ್ನು ತೋರಿಸಿ, ಇವೇ ವೇದಗಳು, ನೀನು ೩೦೦ ವರ್ಷಕಾಲ ಮಾಡಿದ ಅಧ್ಯಯನ ಒಂದು ಮುಷ್ಟಿಮಾತ್ರದಷ್ಟೇ ಎಂದು ಹೇಳಿ, ವೇದಗಳು ಸರ್ವವಿದ್ಯೆ ಎಂದು ಹೇಳಿದ್ದಾನೆಂದು ವೇದದಲ್ಲಿ ಉಪಾಖ್ಯಾನವಿದೆ.) ಭಗವದ್ಗೀತೆಯಲ್ಲೂ ಸಹ, 'ಯಾವಾನರ್ಥ ಉದಪಾನೇ ಸರ್ವತಃ ಸಂಪ್ಲುತೋದಕೇ । ತಾವಾನ್ ಸರ್ವೇಷು ವೇದೇಷು ಬ್ರಾಹ್ಮಣಸ್ಯ ವಿಜಾನತಃ ॥' ಎಂದು ವೇದವನ್ನು ಸಮುದ್ರಕ್ಕೆ ಹೋಲಿಸಿದೆ. ಇದರಿಂದ ವೇದದ ಸರ್ವಾರ್ಥಪರಿಪೂರ್ಣತ್ವ ಹಾಗೂ ಅಗಾಧತ್ವ, ಅನಂತತ್ವಗಳು ವ್ಯಕ್ತವಾಗುತ್ತವೆ.

ಹೀಗೆ ಅನಂತವೂ ಅನವದ್ಯವೂ ಆದ ವೇದವನ್ನು ಭಗವಂತನೇ ಬಹುಪ್ರಕಾರವಾಗಿ, (ಹಂಸ, ಮತ್ಸ್ಯ, ಹಯಗ್ರೀವ, ನರನಾರಾಯಣ, ದತ್ತಾತ್ರೇಯ, ಗೀತಾಚಾರ್ಯ ಮುಂತಾದ ಅವತಾರಗಳಿಂದ) ಸಂರಕ್ಷಿಸಿ ಪೋಷಿಸಿಕೊಂಡು ಬಂದಿದ್ದಾನೆ. 'ಶ್ರುತಿಸ್ಮೃತೀ ಮಮೈವಾಜ್ಞೇ' ಎಂದ ಹಾಗೆ ಭಗವಂತನು ವೇದವನ್ನು ತನ್ನ ದಿವ್ಯಾಜ್ಞೆಯೆಂದಿದ್ದಾನೆ. 'ಭೀಷಾಸ್ಮಾದ್ವಾತಃ ಪವತೇ । ಭೀಷೋದೇತಿ ಸೂರ್ಯಃ । ಭೀಷಾಸ್ಮಾದಗ್ನಿಶ್ಚೇಂದ್ರಶ್ಚ । ಮೃತ್ಯುರ್ಧಾವತಿ ಪಂಚಮ ಇತಿ' ಎಂಬ ರೀತಿಯಲ್ಲಿ ಸಕಲ ದೇವತೆಗಳೂ ಅವನ ಆಜ್ಞೆಗೆ ಹೆದರಿ ನಡೆಯುವುದರಿಂದ ವೇದದ ಮಹಿಮೆ ವ್ಯಕ್ತವಾಗುತ್ತದೆ.

ವೇದಗಳು ಭಗವಂತನ ನಿಃಶ್ವಾಸರೂಪವಾಗಿವೆ ಎಂದು ಹೇಳಲಾಗಿದೆ. ('ಅಸ್ಯ ಹ ವೈ ಮಹತೋ ಭೂತಸ್ಯ ನಿಃಶ್ವಸಿತಂ ಯದೃಗ್ವೇದೋ ಯಜುರ್ವೇದಸ್ಸಾಮವೇದೋಽಥರ್ವಾಂಗಿರಸಃ....' ಎಂದು ವೇದದಲ್ಲಿಯೂ, 'ವಾಚೋ ಬಭೂವು-ರುಶತೀಃ ಶ್ವಸತೋಽಸ್ಯ ನಸ್ತಃ' ಎಂದು ಶ್ರೀಮದ್ಭಾಗವತದಲ್ಲಿಯೂ ಹೇಳಿದೆ). ಇಷ್ಟೇ ಅಲ್ಲದೆ ವೇದಗಳು ಭಗವಂತನನ್ನು

ಸ್ತೋತ್ರ ಮಾಡುವ ದಿವ್ಯವಾಣಿ ಎಂದು ಮುಕುಂದಮಾಲೆಯಲ್ಲಿ 'ಸ್ತೋತಾ ವೇದಃ' ಎಂಬುದರಿಂದ ತಿಳಿಯುತ್ತದೆ. ಈ ಅಂಶವನ್ನೇ ಉಪನಿಷತ್ತು, 'ಸರ್ವೇ ವೇದಾ ಯತ್ಪದಮಾಮನಂತಿ' ಎಂದು ಹೇಳುತ್ತದೆ. ಭಗವಂತನ ವಾಹನವಾದ ಗರುತ್ಮಂತನೂ ವೇದಮಯನಾಗಿದ್ದು ಭಗವಂತ ವೇದದಿಂದ ಪ್ರಕಾಶಿಸುತ್ತಾನೆಂದು ವಿಶದವಾಗುತ್ತದೆ. ಗರುತ್ಮಂತನ ವೇದಮಯತ್ವವು, 'ಸುಪರ್ಣೋಽಸಿ ಗರುತ್ಮಾನ್ ತ್ರಿವೃತ್ತೇ ಶಿರೋ ಗಾಯತ್ರಂ ಚಕ್ಷುಃ ಸ್ತೋಮ ಆತ್ಮಾ ಸಾಮ ತೇ ತನೂಃ ವಾಮದೇವ್ಯಂ ಬೃಹದ್ರಥಂತರೇ ಪಕ್ಷೌ ಯಜ್ಞಾಯಜ್ಞಿಯಂ ಪುಚ್ಛಂ ಛಂದಾಗ್ಂಸ್ಯಂಗಾನಿ ಧಿಷ್ಣಿಯಾಶ್ಶಫಾ ಯಜೂಗ್ಂಷಿ ನಾಮ' ಎಂದು ವೇದೋಕ್ತವಾಗಿಯೂ, 'ದಾಸಸ್ಸಖಾ ವಾಹನಂ ಆಸನಂ ಧ್ವಜೋ ಯಸ್ತೇ ವಿತಾನಂ ವ್ಯಜನಂ ತ್ರಯೀಮಯಃ । ಉಪಸ್ಥಿತಂ ತೇನ ಪುರೋ ಗರುತ್ಮತಾ' ಎಂದೂ ಆಳವಂದಾರರ ಶ್ರೀಸೂಕ್ತಿಯಿಂದಲೂ ಸ್ಪಷ್ಟವಾಗಿದೆ.

ಭೀಷ್ಮಾಚಾರ್ಯರು ಯುಧಿಷ್ಠಿರನಿಗೆ ಧರ್ಮೋಪದೇಶವನ್ನು ಮಾಡುತ್ತ 'ಏಷ ಮೇ ಸರ್ವಧರ್ಮಾಣಾಂ ಧರ್ಮೋಽಧಿಕತಮೋ ಮತಃ । ಯದ್ಭಕ್ತ್ಯಾ ಪುಂಡರೀಕಾಕ್ಷಂ ಸ್ತವೈರರ್ಚೇನ್ನರಸ್ಸದಾ ॥' ಎಂದು ಭಗವನ್ನಾಮಸಂಕೀರ್ತನವೇ ಪರಮಧರ್ಮ ಎಂದಿದ್ದಾರೆ. ಇದೂ ವೇದದ ಒಂದೊಂದು ಅಕ್ಷರದ ಪಾರಾಯಣದಿಂದ ಸಾಧ್ಯ ಎಂದು, 'ವೇದಾಕ್ಷರಾಣಿ ಯಾವಂತಿ ಪಠಿತಾನಿ ದ್ವಿಜಾತಿಭಿಃ । ತಾವಂತಿ ಹರಿನಾಮಾನಿ ಕೀರ್ತಿತಾನಿ ನ ಸಂಶಯಃ ॥' ಎಂಬುದರಿಂದ ಸುವಿದಿತ. ವೇದ ಮಹತ್ತಾದ ಧನವೂ ಆಗಿದೆ ಎಂಬುದು 'ಋಚಸ್ಸಾಮಾನಿ ಯಜೂಗ್ಂಷಿ । ಸಾ ಹಿ ಶ್ರೀರಮೃತಾ ಸತಾಂ' ಎಂಬ ವೇದವಾಕ್ಯದಿಂದ ತಿಳಿಯುತ್ತದೆ. ಸಜ್ಜನರ ಶಾಶ್ವತವಾದ ಸಂಪತ್ತು ವೇದಗಳೇ ಎಂದು ಇದರ ತಾತ್ಪರ್ಯ. ವೇದ ಎಷ್ಟು ವತ್ಸಲ ಹಾಗೂ ಹಿತಚಿಂತಕ ಎಂಬುದನ್ನು 'ಶಾಸ್ತ್ರಂ ಹಿ ವತ್ಸಲತರಂ ಮಾತಾಪಿತೃಸಹಸ್ರತಃ' ಎಂದು ಸಹಸ್ರ-ಮಾತಾಪಿತೃಗಳಿಗೂ ಮಿಗಿಲಾದುದೆಂದಿದ್ದಾರೆ.

ವಿಶಿಷ್ಟಾದ್ವೈತಸಿದ್ಧಾಂತದ ಆಚಾರ್ಯರೂ ಸಹ ವೇದಕ್ಕೆ ಪರಮಪ್ರಾಮಾಣ್ಯವನ್ನು ಬಹುಮುಖವಾಗಿ ವ್ಯಕ್ತಪಡಿಸಿದ್ದಾರೆ. ಭಗವದ್ಭಾಷ್ಯಕಾರರು ವೇದಾರ್ಥಸಂಗ್ರಹದಲ್ಲಿ, ವೇದವಾಕ್ಯಗಳಲ್ಲಿ ಯಾವುದೇ ಭಾಗವನ್ನೂ ಸಹ ಅಪ್ರಮಾಣವೆಂದೋ, ಗೌಣವೆಂದೋ ಅಲ್ಲಗಳೆಯಲಾಗದೆಂದೂ, ವೇದವಾಕ್ಯಗಳಲ್ಲಿ ಆಪಾತತಃ ಪರಸ್ಪರ ಯಾವುದೇ ವಿರೋಧ ಕಂಡು ಬಂದರೂ ಅದನ್ನು ಯಾವ ವಾಕ್ಯದ ಪ್ರಾಮಾಣ್ಯವನ್ನೂ ತ್ಯಾಗ ಮಾಡದೆ ಸಮಂಜಸವಾಗಿ ಘಟಕವಾಕ್ಯಗಳು ಮೊದಲಾದರ ಸಹಾಯದಿಂದ ಪರಿಹರಿಸ ಬೇಕೆಂದು ಅನುಗ್ರಹಿಸಿದ್ದಾರೆ. ಇದಕ್ಕೆ ವೇದಾಂತವಿಷಯವಾದ ಕೆಲವು ವಾಕ್ಯಗಳಲ್ಲಿ ಹೇಗೆ ಆಪಾತತಃ ಪರಸ್ಪರವಿರೋಧ ಭಾಸವಾಗುತ್ತದೆ ಹಾಗೂ ಅದು ಹೇಗೆ ಘಟಕಶ್ರುತಿವಾಕ್ಯಗಳಿಂದ ಪರಿಹೃತವಾಗುತ್ತದೆ ಎಂಬುದನ್ನು ಸದೃಷ್ಟಾಂತವಾಗಿ ಉಪಪಾದಿಸಿದ್ದಾರೆ. ಶ್ರೀಪರಾಶರಭಟ್ಟರೂ ಸಹ ತಮ್ಮ ಶ್ರೀರಂಗರಾಜಸ್ತವ ಎಂಬ ಸ್ತೋತ್ರದಲ್ಲಿ, ಚಾರ್ವಾಕರೂ ಸಹ (ಚಾರ್ವಾಕರೆಂಬ ಮತದವರು ಪ್ರತ್ಯಕ್ಷವಲ್ಲದ ಯಾವ ವಸ್ತುವನ್ನೂ ಒಪ್ಪುವುದಿಲ್ಲ ಹಾಗೂ ಪ್ರತ್ಯಕ್ಷಕ್ಕೆ ಅತಿರಿಕ್ತವಾದ ಬೇರಾವ ಪ್ರಮಾಣವೂ ಇಲ್ಲ ಎಂಬ ಸಿದ್ಧಾಂತದವರು) ವೇದಪ್ರಾಮಾಣ್ಯವನ್ನು ಒಪ್ಪಲೇಬೇಕಾಗುತ್ತದೆ. ಏಕೆಂದರೆ ವೇದಶಬ್ದವನ್ನು ಉಚ್ಚರಿಸಿ ಅದನ್ನು ಕೇಳಿದಾಗ ಅದು ಕಿವಿ ಮೂಲಕವಾಗಿ (ಪ್ರತ್ಯಕ್ಷವಾಗಿಯೇ) ಗೋಚರಿಸುತ್ತದೆ (ಶ್ರಾವಣಪ್ರತ್ಯಕ್ಷ) ಮತ್ತು ಅದು ಮನಸ್ಸಿನಲ್ಲಿ ಅದರ ವಿಷಯವಾದ ಜ್ಞಾನವನ್ನು ಉಂಟುಮಾಡುತ್ತದೆ. ಹೀಗೆ ಉಂಟಾದ ಜ್ಞಾನಕ್ಕೆ ಬಾಧಕ ಯಾವುದೂ ಕಂಡುಬಂದಿಲ್ಲವಾದ್ದರಿಂದ, ಪ್ರತ್ಯಕ್ಷದಿಂದಾಗಲಿ ಅಥವಾ ಅನುಮಾನದಿಂದಾಗಲಿ, ಆ ಶ್ರುತಿಯೂ, ಶ್ರುತಿಜನ್ಯವಾದ ಜ್ಞಾನವೂ ಪ್ರಮಾಣಗಳು ಎಂದು 'ಪ್ರತ್ಯಕ್ಷಾ ಶ್ರುತಿಃ ಅರ್ಥಧೀಶ್ಚ ನ ತಥಾ ದೋಷಸ್ತದರ್ಥಃ ಪುನಃ ಧರ್ಮಾಧರ್ಮಪರಾವರೇಶ್ವರಮುಖಃ ಪ್ರತ್ಯಕ್ಷಬಾಧ್ಯೋ ನ ಚ' ಎಂಬ ಶ್ಲೋಕದಲ್ಲಿ ಹೇಳಿದ್ದಾರೆ. ಅದೇ ಸ್ತೋತ್ರದಲ್ಲಿ ವೇದದ ಪ್ರಾಮಾಣ್ಯವನ್ನೂ, ಸ್ಮೃತೀತಿಹಾಸಪುರಾಣಗಳ ಪ್ರಾಮಾಣ್ಯ ವೇದೋಕ್ತ ವಿಷಯವನ್ನು ಸ್ಪಷ್ಟೀಕರಿಸುವುದರಿಂದಲೂ, ಅದಕ್ಕೆ ಅನುಗುಣವಾಗಿರುವುದರಿಂದಲೇ ಎಂಬುದನ್ನೂ, 'ವೇದೇ ಕರ್ತ್ರಾದ್ಯಭಾವಾದ್ಬಲವತಿ ಹಿ ನಯೈಃ ತ್ವನ್ಮುಖೇ ನೀಯಮಾನೇ ತನ್ಮೂಲತ್ವೇನ ಮಾನಂ ತದಿತರದಖಿಲಂ ಜಾಯತೇ ರಂಗಧಾಮನ್' ಎಂದು ಹೇಳಿದ್ದಾರೆ. ಶ್ರೀಮದ್ವೇದಾಂತದೇಶಿಕರು ಶ್ರೀಮದ್ಯಾಮುನಾಚಾರ್ಯರ 'ಆಗಮಪ್ರಾಮಾಣ್ಯ' ಗ್ರಂಥದ ಕ್ರಮವನ್ನನುಸರಿಸಿ ತಮ್ಮ ನ್ಯಾಯಪರಿಶುದ್ಧಿ, ನ್ಯಾಯಸಿದ್ಧಾಂಜನ, ಸರ್ವಾರ್ಥಸಿದ್ಧಿ, ತತ್ತ್ವಮುಕ್ತಾಕಲಾಪ, ಅಧಿಕರಣಸಾರಾವಳಿ, ಪರಮತಭಂಗ ಮುಂತಾದ ಗ್ರಂಥಗಳಲ್ಲಿ ವೇದಪ್ರಾಮಾಣ್ಯವನ್ನು ಅಬಾಧಿತವಾಗಿ ಸ್ಥಾಪಿಸಿದ್ದಾರೆ.

ಹೀಗೆ ವೇದವೆಂಬುದು ಒಂದು ಉತ್ತಮ ಪ್ರಮಾಣ. ಅದು ಶಬ್ದರೂಪವಾಗಿದೆ ಎಂದು ಅದರ ಸ್ವರೂಪವನ್ನೂ, ಅದು ಧರ್ಮಾಧರ್ಮವಿವೇಚನೆಗೆ ಸಾಧನವಾಗಿರುವುದರಿಂದ ಅವರ ಜ್ಞಾನ, ಅನುಸಂಧಾನ ಮತ್ತು ಉಪಯೋಗ ಆವಶ್ಯಕ ಎಂದು ಹೇಳಿದ್ದಾಯಿತು. ಇನ್ನು ಅದನ್ನು ದಿನನಿತ್ಯ ಜೀವನದಲ್ಲಿ ಉಪಯೋಗಿಸುವ ವಿಧಾನವನ್ನು ಚಿಂತಿಸೋಣ.

ಲೋಕದಲ್ಲಿ ತಿಳಿದುಕೊಳ್ಳಬೇಕಾದ ವಿಷಯಗಳು ಅನಂತವಾಗಿವೆ. ಅದಕ್ಕೆ ಬೇಕಾದ ಕಾಲ, ಶಕ್ತಿ, ಬುದ್ಧಿ, ಆಯುಸ್ಸು, ಇವುಗಳು ಪರಿಮಿತವಾಗಿವೆ ಹಾಗೂ ವಿಘ್ನಗಳು ಹೆಚ್ಚಾಗಿವೆ. ಆದ್ದರಿಂದ ತ್ಯಾಜ್ಯೋಪಾದೇಯವಿವೇಕ (ಅವಶ್ಯಜ್ಞಾತವ್ಯ-

ಗಳು ಮತ್ತು ಇತರವು) ಅವಶ್ಯಕ ಎಂಬುದನ್ನು 'ಅನಂತಪಾರಂ ಬಹು ವೇದಿತವ್ಯಂ ಅಲ್ಪಶ್ಚ ಕಾಲಃ ಬಹವಶ್ಚ ವಿಘ್ನಾಃ । ಯತ್ಸಾರಭೂತಂ ತದುಪಾದದೀತ ಹಂಸೋ ಯಥಾ ಕ್ಷೀರಮಿವಾಂಬುಮಿಶ್ರಂ ॥' ಎಂದು ಹಿರಿಯರು ಸಾರಗ್ರಹಣವನ್ನು ವಿಧಿಸಿದ್ದಾರೆ. ಈ ರೀತಿ ಪ್ರಧಾನವಾದುದು **ತತ್ತ್ವ, ಹಿತ** ಮತ್ತು **ಪುರುಷಾರ್ಥ** ಎಂಬ ಮೂರು ವಿಷಯಗಳ ಜ್ಞಾನ. ಇದು ಆತ್ಮಕ್ಷೇಮಕ್ಕೆ ಆವಶ್ಯಕ. ತತ್ತ್ವವೆಂಬುದು ಚೇತನ (ಜ್ಞಾನವುಳ್ಳ ವಸ್ತುಗಳು), ಅಚೇತನ (ಜ್ಞಾನವಿಲ್ಲದ ವಸ್ತುಗಳು) ಹಾಗೂ ಈಶ್ವರ ಎಂಬ ಮೂರು ವಿಧವಾದ ತತ್ತ್ವಗಳ ಸ್ವರೂಪ, ಸ್ವಭಾವ ಹಾಗೂ ಸಂಬಂಧಾದಿಗಳ ಜ್ಞಾನ. ಹಿತವೆಂಬುದು ಪರಮಪುರುಷಾರ್ಥವನ್ನು ಪಡೆಯಲು ಅನುಷ್ಠಿಸಬೇಕಾದ ಉಪಾಯ ಅಥವಾ ಸಾಧನ. ಪುರುಷಾರ್ಥವೆಂಬುದು ತತ್ತ್ವಜ್ಞಾನದಿಂದಲೂ, ಹಿತಾಚರಣೆಯಿಂದಲೂ ಪಡೆಯುವ ಮತ್ತು ಅನುಭವಿಸುವ ಪರಮಪ್ರಯೋಜನ ಅಥವಾ ಫಲ. ಇದು ಪರಿಪೂರ್ಣಪರಬ್ರಹ್ಮಾನುಭವ. ಹೀಗೆ ಈ ಮೂರು ವಿಷಯಗಳನ್ನು ವೇದ ಪ್ರತಿಪಾದಿಸುವ ಕ್ರಮವನ್ನು ಮುಂದೆ ವಿಶದವಾಗಿ ವಿಚಾರ ಮಾಡೋಣ.

**ತತ್ತ್ವದ** ವಿಷಯವಾಗಿ ವೇದ ಹೇಳುವ ಕಡೆಯಲ್ಲಿ, 'ನಾರಾಯಣಪರಂ ಬ್ರಹ್ಮ ತತ್ತ್ವಂ ನಾರಾಯಣಃ ಪರಃ' ಎಂದು ಶ್ರೀಮನ್ನಾರಾಯಣನೇ ಪರತತ್ತ್ವವೆಂದು (ಈಶ್ವರ) ನಿಷ್ಕರ್ಷವಾಗಿ ಹೇಳಿದೆ. ಸ್ಮೃತಿಕಾರರೂ ಸಹ, 'ತತ್ತ್ವಂ ಜಿಜ್ಞಾಸಮಾನಾನಾಂ ಹೇತುಭಿಸ್ಸರ್ವತೋಮುಖೈಃ । ತತ್ತ್ವಮೇಕೋ ಮಹಾಯೋಗೀ ಹರಿರ್ನಾರಾಯಣಃ ಸ್ಮೃತಃ ॥' ಎಂದಿದ್ದಾರೆ. ವೇದವ್ಯಾಸರೂ, 'ಸತ್ಯಂ ಸತ್ಯಂ ಪುನಸ್ಸತ್ಯಂ ಉದ್ಧೃತ್ಯ ಭುಜಮುಚ್ಯತೇ । ವೇದಾತ್ ಶಾಸ್ತ್ರಂ ಪರಂ ನಾಸ್ತಿ ನ ದೈವಂ ಕೇಶವಾತ್ಪರಂ ॥' ಎಂದು ಪ್ರತಿಜ್ಞೆ ಮಾಡಿದ್ದಾರೆ. ಜೀವತತ್ತ್ವವನ್ನು (ಚೇತನ) ಹೇಳುವಾಗ 'ಜ್ಞಾಜ್ಞೌ ದ್ವಾವಜಾವೀಶನೀಶೌ', 'ದ್ವಾ ಸುಪರ್ಣಾ ಸಯುಜಾ ಸಖಾಯಾ' ಇತ್ಯಾದಿಗಳಲ್ಲಿ ಜೀವಸ್ವರೂಪ ನಿತ್ಯ, ಕರ್ಮವಶ್ಯ ಹಾಗೂ ಭಗವಚ್ಛೇಷ ಎಂದು ಹೇಳಿದೆ. ಪೂರ್ವಾಚಾರ್ಯರೂ, 'ನಾಯಂ ದೇವೋ ನ ಮರ್ತ್ಯೋ ವಾ ನ ತಿರ್ಯಕ್ ಸ್ಥಾವರೋಽಪಿ ವಾ । ಜ್ಞಾನಾನಂದಮಯಸ್ತ್ವಾತ್ಮಾ ಶೇಷೋ ಹಿ ಪರಮಾತ್ಮನಃ ॥' ಎಂದು ಜ್ಞಾನಾನಂದಸ್ವರೂಪನೂ ಭಗವದ್ದಾಸನೆಂದೂ ಹೇಳಿದ್ದಾರೆ. 'ಅಜಾಮೇಕಾಂ ಲೋಹಿತಶುಕ್ಲಕೃಷ್ಣಾಂ ಬಹ್ವೀಂ ಪ್ರಜಾಂ ಜನಯಂತೀಗ್ಂ ಸರೂಪಾಂ' ಮುಂತಾದ ಕಡೆಗಳಲ್ಲಿ ಪ್ರಕೃತಿತತ್ತ್ವವನ್ನು (ಅಚೇತನ) ನಿತ್ಯ, ತ್ರಿಗುಣಾತ್ಮಕವೆಂದೆಲ್ಲಾ ವಿಸ್ತರಿಸಿದೆ. ಈ ಮೂರು ತತ್ತ್ವಗಳು ಸ್ವರೂಪತಃ ಭಿನ್ನವಾದರೂ ಶರೀರ-ಶರೀರಿಭಾವದಿಂದ ಏಕತತ್ತ್ವವಾಗುತ್ತವೆ ಎಂದು ಅಂತರ್ಯಾಮಿ ಬ್ರಾಹ್ಮಣಾದಿಗಳಲ್ಲಿ ಹೇಳಿದೆ. ಚೇತನಾಚೇತನಗಳು ಈಶ್ವರನ ಶರೀರ ಹಾಗೂ ಈಶ್ವರ ಶರೀರಿ ಹಾಗೂ ಸ್ವಾಮಿ. ಇದು, 'ಯಸ್ಯ ಪೃಥಿವೀ ಶರೀರಂ....', 'ಯಸ್ಯಾತ್ಮಾ ಶರೀರಂ....' ಮುಂತಾದ ಭಾಗಗಳಲ್ಲಿ ಸ್ಪಷ್ಟ. ಭಗವಂತನ ಸ್ವಾಮಿತ್ವ, 'ಅಂತಃ ಪ್ರವಿಷ್ಟಃ ಶಾಸ್ತಾ ಜನಾನಾಗ್ಂ ಸರ್ವಾತ್ಮಾ', 'ಕ್ಷರಂ ಪ್ರಧಾನಮಮೃತಾಕ್ಷರಂ ಹರಃ ಕ್ಷರಾತ್ಮಾನಾವೀಶತೇ ದೇವ ಏಕಃ' ಇತ್ಯಾದಿಗಳಲ್ಲಿ ವಿಶದ. ಈ ರೀತಿಯ ಚೇತನಾಚೇತನ-ಈಶ್ವರರೂಪವಾದ ತತ್ತ್ವತ್ರಯದ ಪ್ರತಿಪಾದಕವಾದ ವಾಕ್ಯಗಳು ಬ್ರಹ್ಮಕಾಂಡವೆಂಬ ಉಪನಿಷತ್ತುಗಳಲ್ಲಿ ಅಸಂಖ್ಯವಾಗಿವೆ. ಇವುಗಳನ್ನು ಬ್ರಹ್ಮಸೂತ್ರಗಳ ಹಾಗೂ ಇತರ ಉಪಬೃಂಹಣಗಳಿಂದಲೂ (ಇತಿಹಾಸ ಪುರಾಣಗಳು) ವಿಚಾರಮಾಡಿ ಸಿದ್ಧಾಂತ ಮಾಡಲಾಗಿದೆ. ಇದು ವೇದಾಂತ ಶಾಸ್ತ್ರದ ವಿಷಯವಾಗಿದೆ.

**ಹಿತ** ವಿಷಯವಾಗಿ ವೇದ ಉಪದೇಶಿಸುವಲ್ಲಿ ಭಗವತ್ಪ್ರಾಪ್ತಿಗೆ ೧೨ ಉಪಾಯಗಳನ್ನು ಹೇಳಿದೆ. ಅವು ಸತ್ಯಂ, ತಪಃ, ದಮಃ, ಶಮಃ, ದಾನಂ, ಧರ್ಮಃ, ಪ್ರಜನನಂ, ಅಗ್ನಯಃ, ಅಗ್ನಿಹೋತ್ರಂ, ಯಜ್ಞಃ, ಮಾನಸಂ, ನ್ಯಾಸಃ ಎಂಬುವು. ಇವೆಲ್ಲ ಸಾಧ್ಯೋಪಾಯಗಳು. ಇವೆಲ್ಲವೂ ಅಂಗವಾಗಿದ್ದೂ ಭಕ್ತಿ(ಉಪಾಸನೆ)ಯೇ ಪ್ರಧಾನವೆಂದು ಹೇಳಿದೆ. ಸಿದ್ಧೋಪಾಯನಾಗಿ ಭಗವಂತನನ್ನೇ ವರಿಸಬೇಕೆಂಬುದೂ ವೇದದಲ್ಲಿ 'ನಾಯಮಾತ್ಮಾ ಪ್ರವಚನೇನ ಲಭ್ಯಃ ನ ಮೇಧಯಾ ನ ಬಹುನಾ ಶ್ರುತೇನ। ಯಮೇವೈಷ ವೃಣುತೇ ತೇನ ಲಭ್ಯಸ್ತಸ್ಯೈಷ ಆತ್ಮಾ ವಿವೃಣುತೇ ತನೂಂ ಸ್ವಾಮ್ ॥' ಎಂದು ಹೇಳಿದೆ. ಹೀಗೆ ವೇದೋಕ್ತ-ವಾದ ವರ್ಣಾಶ್ರಮಧರ್ಮಗಳನ್ನು ಯಾವಜ್ಜೀವ ಅನುಷ್ಠಾನ ಮಾಡಿ, ಸಿದ್ಧೋಪಾಯನನ್ನಾಗಿ ಭಗವಂತನನ್ನೇ ವರಿಸಿ (ಆತ್ಮರಕ್ಷಾಭರನ್ಯಾಸವನ್ನು ಮಾಡಿ, ತತ್ಪ್ರೀತ್ಯರ್ಥವಾಗಿಯೇ ಎಲ್ಲ ಕಾರ್ಯಗಳನ್ನೂ ಸಾತ್ತ್ವಿಕತ್ಯಾಗ ಪುರಸ್ಸರವಾಗಿ ಮಾಡುವುದೇ ಪರಮಹಿತವೆಂದು ಹೇಳಿದೆ. ಇದು, 'ತಮೇತಂ ವೇದಾನುವಚನೇನ ಬ್ರಾಹ್ಮಣಾ ವಿವಿದಿಷನ್ತಿ ಯಜ್ಞೇನ ದಾನೇನ ತಪಸಾನಾಶಕೇನ' ಎಂದೂ, '.... ಆಚಾರ್ಯಕುಲಾದ್ವೇದಮಧೀತ್ಯ ಯಥಾವಿಧಾನಂ ಗುರೋಃ ಕರ್ಮಾತಿಶೇಷೇಣ ಅಭಿಸಮಾವೃತ್ಯ ಕುಟುಂಬೇ ಶುಚೌ ದೇಶೇ ಸ್ವಾಧ್ಯಾಯಮಧೀಯಾನೋ ಧಾರ್ಮಿಕಾನ್ವಿದಧದನ್ಯತ್ರ ತೀರ್ಥೇಭ್ಯಃ ಸ ಖಲ್ವೇವಂ ವರ್ತಯನ್ ಯಾವದಾಯುಷಂ ಬ್ರಹ್ಮಲೋಕಮಭಿಸಂಪದ್ಯತೇ ನ ಚ ಪುನರಾವರ್ತತೇ....' ಎಂದು ವಿವೃತವಾಗಿದೆ. ಇದಕ್ಕೆ ವ್ಯಾಖ್ಯಾನ ಮಾಡುತ್ತ ಶ್ರೀಭಾಷ್ಯಕಾರರು, 'ಏವಮಹರಹರನುಷ್ಠೀಯಮಾನ-ವರ್ಣಾಶ್ರಮಧರ್ಮಾನುಗೃಹೀತ-ತದುಪಾಸನರೂಪ-ತತ್ಸಮಾರಾಧನಪ್ರೀತಃ ಉಪಾಸೀನಾನ್ ಅನಾದಿಕಾಲ-ಪ್ರವೃತ್ತ-ಅನಂತ-ದುಸ್ತರ-ಕರ್ಮಸಂಚಯ-ರೂಪಾವಿದ್ಯಾಂ ವಿನಿವರ್ತ್ಯ ಸ್ವಯಾಥಾತ್ಮ್ಯಾನುಭವರೂಪ-ಅನವಧಿಕಾತಿಶಯಾನಂದಂ ಪ್ರಾಪಯ್ಯ ಪುನರ್ನಾವರ್ತ-ಯತೀತ್ಯಪಿ ಶಬ್ದಾದೇವಾವಗಮ್ಯತೇ' ಎಂದು ಶ್ರೀಭಾಷ್ಯದಲ್ಲಿ ಅನುಗ್ರಹಿಸಿದ್ದಾರೆ. ಎಂದರೆ ವೇದೋಕ್ತವಾದ

ನಿತ್ಯಕರ್ಮಾನುಷ್ಠಾನಗಳನ್ನು ಸ್ವವರ್ಣಾಶ್ರಮಕ್ಕೆ ಅನುಗುಣವಾಗಿ ಮಾಡುವದರೊಂದಿಗೆ ಬ್ರಹ್ಮೋಪಾಸನೆ ಮಾಡಿದವರನ್ನು ಅಂತಹ ಉಪಾಸನೆಯಿಂದ ಪ್ರೀತನಾದ ಭಗವಂತನು ಅನಾದಿಕರ್ಮಪ್ರವಾಹದ ವಿಷಮಪರಿಪಾಕದಿಂದ ಮುಕ್ತನನ್ನಾಗಿ ಮಾಡಿ ತನ್ನ ಯಥಾವದನುಭವವನ್ನು ಕೊಟ್ಟು ಸುಖಿಸುತ್ತಾನೆ ಎಂದಿರುವುದರಿಂದ ವರ್ಣಾಶ್ರಮ ಧರ್ಮಾನುಷ್ಠಾನದ ಆವಶ್ಯಕತೆ ತಿಳಿಯುತ್ತದೆ.

ಧರ್ಮಸೂತ್ರದಲ್ಲಿ ಆಪಸ್ತಂಬರು 'ಚತ್ವಾರೋ ವರ್ಣಾಃ । ಬ್ರಾಹ್ಮಣ-ಕ್ಷತ್ರಿಯ-ವೈಶ್ಯ-ಶೂದ್ರಾಃ' ಎಂದು ಹೇಳಿರುವ ಹಾಗೆ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಎಂದು ವರ್ಣಗಳು ನಾಲ್ಕು (ಬ್ರಾಹ್ಮಣಾದಿ ವಿಭಾಗವನ್ನು ಜಾತಿಯೆಂಬ ತಪ್ಪಾದ ತಿಳಿವಳಿಕೆ ಬಳಕೆಯಲ್ಲಿದೆ. ವಸ್ತುತಃ ಅವು ವರ್ಣಗಳೇ. ಜಾತಿಗಳು ದೇವ, ತಿರ್ಯಕ್, ಮನುಷ್ಯ ಮತ್ತು ಸ್ಥಾವರ ಎಂಬ ನಾಲ್ಕು ಮಾತ್ರ). ಆಶ್ರಮಗಳು ಬ್ರಹ್ಮಚಾರಿ, ಗೃಹಸ್ಥ, ವಾನಪ್ರಸ್ಥ ಮತ್ತು ಯತಿ ಎಂದು ನಾಲ್ಕು ವಿಧ. ಆದ್ದರಿಂದ ಎಲ್ಲರೂ ತಮ್ಮ ವರ್ಣಕ್ಕೂ, ಆಶ್ರಮಕ್ಕೂ ಉಚಿತವಾದ ಕರ್ಮಾನುಷ್ಠಾನಗಳನ್ನು ಅವಶ್ಯ ಮಾಡಬೇಕೆಂದಾಯಿತು. ಉಪಬೃಂಹಣಗಳಲ್ಲಿಯೂ, 'ವರ್ಣಾಶ್ರಮಾಚಾರವತಾ ಪುರುಷೇಣ ಪರಃ ಪುಮಾನ್ । ವಿಷ್ಣುರಾರಾಧ್ಯತೇ ಪಂಥಾಃ ನಾನ್ಯಸ್ತತ್ತೋಷಕಾರಣಂ ॥' ಎಂದು ಇದನ್ನೇ ಒತ್ತಾಯಿಸಿದೆ.

[ಈ ವರ್ಣಾಶ್ರಮಧರ್ಮಾನುಷ್ಠಾನದ ಬಗ್ಗೆ ನಾವು ವಿಸ್ತಾರವಾಗಿ ತಿಳಿದು ಕೊಳ್ಳಬೇಕಾಗಿರುವುದರಿಂದ ಈ ಲೇಖನ ಸರಣಿಯಲ್ಲಿ ಮುಂಬರುವ ಸಂಚಿಕೆಗಳಲ್ಲಿ ಈ ವಿಷಯ ಅನುಕ್ರಮವಾಗಿ ವಿಶದಪಡಿಸಲಾಗುತ್ತದೆ. (ಶ್ರೀಯತಿರಾಜ ಮಠದ ಆಶ್ರಯದಲ್ಲಿ (ಮಲ್ಲೇಶ್ವರದಲ್ಲಿ) ಒಂದು ಉಪನ್ಯಾಸ ಸರಣಿಯನ್ನು ಈ ವಿಷಯದಲ್ಲಿ ಏರ್ಪಡಿಸಲಾಗಿದ್ದು ಅದು ಪ್ರತಿ ಭಾನುವಾರ ಸಂಜೆ 6 ರಿಂದ 8 ಘಂಟೆಯವರೆಗೆ (9.8.1981ರಿಂದ) ನಡೆಯುತ್ತಿದೆ.]

**ಪುರುಷಾರ್ಥದಲ್ಲಿ**, ನಾಲ್ಕು ವಿಧ, ಧರ್ಮ, ಅರ್ಥ, ಕಾಮ, ಮತ್ತು ಮೋಕ್ಷ ಎಂದು. ಇದರಲ್ಲಿ ಮೋಕ್ಷವೇ ಪರಮ ಪ್ರಾರ್ಥನೀಯವಾದದ್ದು ಮತ್ತು ಮೋಕ್ಷವನ್ನು ಇಚ್ಛಿಸಿದಲ್ಲಿ ಇತರ ಪುರುಷಾರ್ಥಗಳೂ ಅಪ್ರಾರ್ಥಿತವಾಗಿ ಲಭಿಸುತ್ತವೆ. ಇದನ್ನು ಆಪಸ್ತಂಬರು ಒಂದು ಸೊಗಸಾದ ಉದಾಹರಣೆಯೊಡನೆ ವಿವರಿಸಿದ್ದಾರೆ. ಒಬ್ಬನು ಮರದ ನೆರಳನ್ನು ಪಡೆಯಬೇಕೆಂಬ ಇಚ್ಛೆಯಿಂದ ಒಂದು ಗಿಡವನ್ನು ಬೆಳೆಸಿದರೆ, ಅದು ಮರವಾಗಿ ನೆರಳು ಕೊಡುವ ಅವಸ್ಥೆ ಬಂದಾಗ ಆ ನೆರಳ ಸುಖವನ್ನನುಭವಿಸಿ ಆ ಮರವನ್ನು ಕಡಿದು ಹಾಕಿಬಿಡಬಹುದು. ಹೀಗೆ ಕಾಯಿ, ಹೂವು, (ಅದರ ಸುಗಂಧ) ಇವುಗಳನ್ನು ಇಚ್ಛಿಸುವವನು, ಆಯಾ ಹಂತಕ್ಕೆ ಮರ ಬೆಳೆದ ಕೂಡಲೆ ಆಯಾ ಇಷ್ಟಗಳನ್ನು ಅನುಭವಿಸಿ ಆ ಮರವನ್ನು ಕಡಿದು ಬಿಡಬಹುದು. ಆದರೆ ಒಬ್ಬ ಹಣ್ಣು ಬೇಕೆಂಬ ಆಸೆಯಿಂದ ಒಂದು ಗಿಡವನ್ನು ಬೆಳೆಸಿದರೆ ಆ ಹಣ್ಣು ದೊರಕುವವರೆಗೆ ಕಾಯಬೇಕಾಗುತ್ತದೆ. ಆದರೆ ಇದಕ್ಕೆ ಮುನ್ನವೇ ಆತನಿಗೆ ಆ ಮರದ ನೆರಳು, ಹೂವು (ಗಂಧ) ಅಪ್ರಾರ್ಥಿತವಾದರೂ ದೊರೆಯುತ್ತವೆ. ಹೀಗೆ ಈ ದೃಷ್ಟಾಂತದಲ್ಲಿ ಹಣ್ಣು ಎಂಬುದು ಮೋಕ್ಷಸ್ಥಾನೀಯ ಹಾಗೂ ನೆರಳು, ಗಂಧ ಇತ್ಯಾದಿಗಳು ಧರ್ಮ, ಅರ್ಥ ಇತ್ಯಾದಿಸ್ಥಾನೀಯಗಳು ಎಂದು ವಿವರಿಸಿದ್ದಾರೆ. 'ತದ್ಯಥಾ ಫಲಾರ್ಥೇ ನಿರ್ಮಿತೇ ಛಾಯಾಗಂಧ ಇತ್ಯನೂತ್ಪದ್ಯಂತೇ । ಏವಂ ಧರ್ಮೇಽಪಿ ಚರ್ಯಮಾಣೇಽರ್ಥಾ ಅನೂತ್ಪದ್ಯಂತೇ' ಎಂಬುದು ಅವರ ವಾಕ್ಯ. ಇದನ್ನೇ ಪೂರ್ವರು, 'ಆಯುರಾರೋಗ್ಯಮೈಶ್ವರ್ಯಂ ಭೋಗಾಂಶ್ಚೈವಾನುಷಂಗಿಕಾನ್ । ದದಾತಿ ಧ್ಯಾಯಿನಾಂ ನಿತ್ಯಂ ಅಪವರ್ಗ-ಪ್ರದೋ ಹರಿಃ ॥' ಎಂದಿದ್ದಾರೆ. ಅಂದರೆ, ಮೋಕ್ಷಕ್ಕಾಗಿಯೇ ಭಗವಂತನನ್ನು ಪ್ರಾರ್ಥಿಸಿದರೂ ಸಹ, ಈ ದೇಹಾವಧಿ ಇಲ್ಲಿಯೇ ಸಕಲಸನ್ಮಂಗಳಗಳನ್ನೂ ಅನುಗ್ರಹಿಸಿಯೇ ದೇಹೋತ್ತರಕಾಲದಲ್ಲಿ ಬ್ರಹ್ಮಾನುಭವರೂಪವಾದ ಮೋಕ್ಷಾನು-ಭವವನ್ನು ಭಗವಂತ ದಯಪಾಲಿಸುತ್ತಾನೆ. ಈ ಬ್ರಹ್ಮಾನುಭವವೇ ಪ್ರಧಾನಪುರುಷಾರ್ಥವೆಂಬುದು, 'ಸೋಽಶ್ನುತೇ ಸರ್ವಾನ್ ಕಾಮಾನ್ ಸಹ । ಬ್ರಹ್ಮಣಾ ವಿಪಶ್ಚಿತೇತಿ' ಎಂದೂ, 'ರಸೋ ವೈ ಸಃ । ರಸಗ್ಂ ಹ್ಯೇವಾಯಂ ಲಬ್ಧ್ವಾನಂದೀ ಭವತಿ ।' ಎಂದೂ, 'ಪರಂ ಜ್ಯೋತಿರುಪಸಂಪದ್ಯ ಸ್ವೇನ ರೂಪೇಣ ಅಭಿನಿಷ್ಪದ್ಯತೇ' ಇತ್ಯಾದಿಯಾಗಿ ಅನೇಕ ಉಪನಿಷದ್ವಾಕ್ಯಗಳಿಂದ ಸುಲಭವೇದ್ಯ. ಸಕಲ ಬಂಧಕ-ಕರ್ಮಕ್ಷಯ-ಪೂರ್ವಕ-ಸ್ವಸ್ವರೂಪ-ಆವಿರ್ಭಾವ-ಸಹಿತ-ಪರಬ್ರಹ್ಮಾನುಭವವೇ ಪರಮಪುರುಷಾರ್ಥ ಎಂಬುದು 'ಭಿದ್ಯತೇ ಹೃದಯಗ್ರಂಥಿಃ ಛಿದ್ಯಂತೇ ಸರ್ವಸಂಶಯಾಃ । ಕ್ಷೀಯಂತೇ ಚಾಸ್ಯ ಕರ್ಮಾಣಿ ತಸ್ಮಿನ್ ದೃಷ್ಟೇ ಪರಾವರೇ ॥' ಎಂಬುದರಿಂದಲೂ ಮನದಟ್ಟಾಗುತ್ತದೆ.

ಹೀಗೆ ತತ್ತ್ವ, ಹಿತ, ಪುರುಷಾರ್ಥಗಳ ಜ್ಞಾನ ಉಂಟಾದ ಬಳಿಕ ಅದರ ಅನುಷ್ಠಾನಕ್ಕಾಗಿ ವೇದದಿಂದಲೇ ಕಾರ್ಯಾಕಾರ್ಯ-ವಿವೇಕ ಮಾಡಬೇಕಾಗಿದೆ. ಇದಕ್ಕೆ ವೇದವನ್ನು ಕ್ರಮವಾಗಿ ಅಧ್ಯಯನ ಮಾಡಿ, ಅದರ ಅರ್ಥವಿಚಾರ(ಮೀಮಾಂಸೆ)ದಿಂದ ಅದರಲ್ಲಿ ವಿಹಿತವಾದ ಕರ್ಮಾನುಷ್ಠಾನಗಳನ್ನು ಆಚರಿಸಿ ಭಗವತ್ಪ್ರೀತಿಯನ್ನು ಸಂಪಾದಿಸಿ ಭಗವಂತನನ್ನು ಪಡೆಯಬೇಕು. ಇದನ್ನೇ ಶ್ರೀಮದ್ವೇದಾಂತದೇಶಿಕರು 'ವೇದ್ಯಂ ವೇದೈರಶೇಷೈರ್ವಿಧಿತದಿತರಯೋರ್ವಿಶ್ವಮಾಪ್ಯಾಯಯಂತಂ ಧರ್ಮೈರಾರಾಧನೀಯಂ ಪಿತೃಸುರಮುಖತಃ ಶಾಶ್ವತಂ ಧರ್ಮಮೇಕಂ । ಸಾಂಗಾಧೀತಾಕ್ಷರೌಘಸ್ವರಸಸಮುದಿತಾಪಾತ-

ಧೀಜಾತರಾಗಾತ್ ಮೀಮಾಂಸೇಮಹ್ಯನಂತಂ ವ್ಯವಹಿತವಪುಷಂ ಕಂಚುಕೈರುಜ್ಝಿತಂ ಚ ॥' ಎಂದು ಹೇಳಿದ್ದಾರೆ. ಇಲ್ಲಿ ವೇದವೇದ್ಯನಾದ ಪರಮಪುರುಷನನ್ನು ಆತನ ವಿಧಿನಿಷೇಧರೂಪವಾದ ವೇದದಿಂದ ಅರಿತು ಪಿತೃ ಹಾಗೂ ದೇವತಾದಿ ಮುಖವಾದ ಯಾಗಾದಿಕರ್ಮಗಳನ್ನು, ಸಾಂಗವೇದಾಧ್ಯಯನ ಮಾಡಿ, ತದರ್ಥಜ್ಞಾನವನ್ನು ಸಂಪಾದಿಸಿ, ತನ್ಮೂಲಕ ಆಚರಿಸಿ, ಭಗವಂತನ ಪ್ರೀತಿಪಾತ್ರರಾಗೋಣ ಎಂದು ಹೇಳಲಾಗಿದೆ. ಇಲ್ಲಿ 'ವ್ಯವಹಿತವಪುಷಂ' ಎಂಬುದರಿಂದ ಆಗ್ನೀಂದ್ರಾದಿದೇವತಾರೂಪೇಣ ಅವರುಗಳ ಅಂತರ್ಯಾಮಿಯಾಗಿರುವ ಶ್ರೀಮನ್ನಾರಾಯಣನ ಪೂಜೆಯೂ (ಪೂರ್ವಭಾಗದಲ್ಲಿ ಉಕ್ತವಾದುದು), 'ಕಂಚುಕೈರುಜ್ಝಿತಂ' ಎಂಬುದರಿಂದ ಆತನ ಭೂಷಣಾದಿ ಸ್ಥಾನದಲ್ಲಿರುವ ದೇವತಾದಿಗಳ ಮೂಲಕವಲ್ಲದೆ ನೇರವಾಗಿ ಭಗವದುಪಾಸನರೂಪವಾದ (ಉತ್ತರಕಾಂಡೋಕ್ತ) ಕ್ರಮವೂ ವಿವರಿಸಲಾಗಿದೆ. 'ಸ ಆತ್ಮಾ । ಅಂಗಾನ್ಯನ್ಯಾ ದೇವತಾಃ' ಎಂದು ವೇದದಲ್ಲಿ ಸಕಲದೇವತೆಗಳೂ ಭಗವಂತನ ಶರೀರ (ಅಂಗ) ಭೂತರೆಂದು ಹೇಳಿದೆ.

ಹೀಗೆ ವೇದದ ಜ್ಞಾನ, ಅನುಷ್ಠಾನ, ಅನುಸಂಧಾನಗಳು ಪರಮ ಅವಶ್ಯಕ, ಉಪಕಾರಕ ಹಾಗೂ ಉತ್ತಾರಕವಾಗಿರುವುದರಿಂದ ಇದನ್ನು ಆದರದಿಂದ ಕರಗತ ಮಾಡಿಕೊಳ್ಳಬೇಕೆಂದು ಎಲ್ಲರಲ್ಲೂ ವಿಜ್ಞಾಪನೆ. ಈ ದೃಷ್ಟಿಯಿಂದ ಈ ವಿಷಯದಲ್ಲಿ ಅವಶ್ಯಜ್ಞಾತವ್ಯಗಳಾದ ಹೆಚ್ಚು ವಿಷಯಗಳನ್ನು ಮುಂದೆ ತಿಳಿಸೋಣ.

ಪ್ರೀಯತಾಂ ವಾಸುದೇವಃ ॥